ಬೇಡ ಬೇಡ ಅಂದ್ರೂ ಒಂದನೇ ತಾರೀಖು ಇಪ್ಪತ್ತೈದು ರೂಪಾಯಿ ಆತನ ಜೇಬಿಗೆ ಇಡುತ್ತಿದ್ದ. ಗಟ್ಟಿ ಮನಸ್ಸು ಮಾಡಿ ಸರ್ಕಾರ ಆದೇಶ ಹೊರಡಿಸಿ ಸ್ಟೈಫಂಡರಿಗಳನ್ನು ಪರ್ಮನೆಂಟ್ ಮಾಡಿತ್ತು. ಕೆಲವು ಕಿಲಾಡಿಗಳು ದುಡ್ಡು ಕೊಟ್ಟೋ ಇಲ್ಲವೇ ಇನ್‌ಫ್ಲುಯೆನ್ಸ್ ಮಾಡಿಸಿಯೋ ರೆವಿನ್ಯೂ, ಟ್ಯಾಕ್ಸ್, ಟ್ರೆಜರಿ, ಎಕ್ಸೈಜ್ ಮುಂತಾದ ಚನ್ನಾಗಿ ದುಡ್ಡಾಡುವ ಇಲಾಖೆಗಳಿಗೆ ಹಾಕಿಸಿಕೊಂಡಿದ್ದರು. ಅದರ ಬಗ್ಗೆ ಪರಿಜ್ಞಾನವಿಲ್ಲದ ಪೆಂಚಾಲಯ್ಯ ಕೆಲಸ ಪರ್ಮನೆಂಟ್ ಆದದ್ದೇ ಪಂಚಾಮೃತ ಎಂದು ತಿಳಿದುಕೊಂಡು ಸುಮ್ಮನಿದ್ದರಿಂದ ಲಕ್ಷ್ಮಿ ಅಷ್ಟೇನೂ ಓಡಾಡದ, ಬರಿ ಸರಸ್ವತಿಯದೇ ದರ್ಬಾರು, ಹಾರಾಟವಿದ್ದ ಎಜುಕೇಷನ್ ಡಿಪಾರ್ಮೆಂಟಿನಲ್ಲೇ ಅಬ್ಸಾರ್ಬ್ ಆಗಿದ್ದ ಅರ್ಥಾತ್ ಹೀರಿಸಿಕೊಂಡುಬಿಟ್ಟಿದ್ದ. ಇದಾಗಿ ಮೂವತ್ತಮೂರು ವರ್ಷಗಳು ಪೆಂಚಾಲಯ್ಯನ ಆಯಸ್ಸಿನಿಂದ ಹೇಳದೆ ಕೇಳದೆ ಉದುರಿ ಹೋಗಿವೆ. ಬದುಕಿನ ಜಂಜಾಟದಲ್ಲಿ ಮದುವೆಯೂ ಲೇಟಾಗಿತ್ತು.

ಪಕ್ಕದಲ್ಲಿ ಕೂತಿದ್ದ ಸಹೋದ್ಯೋಗಿ ದೇವೇಗೌಡ, “ಏನ್ ಪೆಂಚಾಲ್, ಏನೋ ತುಂಬಾ ಯೋಚ್ನೆ ಮಾಡ್ತ ಇದ್ದೀಯ. ಗೌರ್ನಮೆಂಟ್ ಕೆಲಸಕ್ಕೆ ಸೇರ್ದೋರು ಒಂದಲ್ಲಾ ಒಂದು ದಿನ ರಿಟೈರ್ ಆಗ್ಲೇಬೇಕು ಎಂಬ ಸತ್ಯ ನಿಂಗೇನು ಗೊತ್ತಿಲ್ವೇನು. ಇನ್ನೇನಪ್ಪ ನಿಂಗೆ, ಸ್ವಂತಕ್ಕೆ ಅಂತ ಒಂದು ಸಣ್ಣ ಗೂಡು ಮಾಡ್ಕೊಂಡಿದ್ದೀಯ. ಇರೋ ಒಬ್ಬ ಮಗನ ಎಜುಕೇಷನ್ ಕಂಪ್ಲೀಟ್ ಆಗ್ತಾ ಇದೆ. ಹೆಣ್ಣುಮಕ್ಕಳೇನೂ ಇಲ್ಲ, ಖರ್ಚು ಮಾಡಿ ದುಡ್ಡು ಕಳ್ಕೊಬೇಕು ಅನ್ನೋದಕ್ಕೆ. ನನಗೆ ನೋಡು, ಎರಡು ಹೆಣ್ಮಕ್ಳು. ನಿಂದಾದ ಮೂರು ತಿಂಗಳಿಗೆ ನಂದೂ ರಿಟೈರ್ಮೆಂಟ್ ಐತೆ. ಊರಲ್ಲಿರೋ ಮೂರೆಕರೆ ಜಮೀನು ಮಾರಿ ಇಬ್ಬರನ್ನೂ ಸಾಗಾಕಲು ತೀರ್ಮಾನ ಮಾಡಿದ್ದೀನಿ.” ಎಂದು ಸಾಂತ್ವನ ಹೇಳುವವನಂತೆ ಕೇಳಿದ್ದ. ದೇವೇಗೌಡನ ಸರ್ವೀಸು ಕೂಡ ಇನ್ನು ಆರು ತಿಂಗಳು ಮಾತ್ರ ಉಳಿದಿತ್ತು. ದೇವೇಗೌಡ ಇಲಾಖೆಯಲ್ಲಿ ಪೆಂಚಾಲಯ್ಯನ ಕ್ಲೋಸ್ ಫ್ರೆಂಡ್ ಆಗಿದ್ದ. ಆತನೂ ಹಳ್ಳಿಗಾಡಿನಿಂದ ಬಂದು ನಗರದಲ್ಲಿ ನೆಲೆ ಕಂಡುಕೊಂಡವನು. ಎಂಥ ವೈಯಕ್ತಿಕ ಸಮಸ್ಯೆಗಳನ್ನಾದರೂ ಒಬ್ಬರು ಇನ್ನೊಬ್ಬರೊಂದಿಗೆ ಹಂಚಿಕೊಳ್ಳುತ್ತಿದ್ದರು. ಕಷ್ಟ ಅಂದಾಗ ಮೂರು ನಾಲ್ಕು ಸಾವಿರ ರೂಪಾಯಿಗಳನ್ನು ಬಿಗುಮಾನ ಬಿಟ್ಟು ಒಬ್ಬರಿಗೊಬ್ಬರು ವಿಶ್ವಾಸದಿಂದ ಆತುಕೊಳ್ಳುತ್ತಿದ್ದರು. ಪೆಂಚಾಲಯ್ಯನ ಚಿಂತೆಗೆ ಈ ಯಾವ ಸಂಗತಿಗಳೂ ಕಾರಣವಾಗಿರಲಿಲ್ಲ. ಹಾಗೆ ನೋಡಿದರೆ ಪೆಂಚಾಲಯ್ಯ ಹಾಸಿಗೆ ಇದ್ದಷ್ಟು ಕಾಲು ಚಾಚು ಎಂಬ ಗಾದೆ ಮಾತಿಗೆ ಹೇಳಿ ಮಾಡಿಸಿದಂತಿದ್ದವನು. ಕನ್ನಡ ಸಾಹಿತ್ಯ ವಿದ್ಯಾರ್ಥಿಯಾಗಿದ್ದರಿಂದಲೂ, ತಾನೂ ಕೂಡಾ ಆಗಾಗ ಕವನಗಳನ್ನು ಬರೆಯುತ್ತಿದ್ದರಿಂದಲೂ ಆಸೆಬುರುಕುತನ ಅಷ್ಟೇನೂ ಇರಲಿಲ್ಲ. ರಾಜಧಾನಿಯೇ ಅಲ್ಲದೆ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಉಪನ್ಯಾಸರು, ಪ್ರಿನ್ಸಿಪಾಲರು ಪ್ರತಿನಿತ್ಯ ಏನಾದರೊಂದು ಕೆಲಸಕ್ಕೆ ಹೆಡ್ ಆಫೀಸಿಗೆ ಬಂದೇ ಬರುತ್ತಿದ್ದರು. ಪೆಂಚಾಲಯ್ಯ ತನ್ನ ಸೆಕ್ಷನ್ನಿಗೆ ಬರುತ್ತಿದ್ದ ಯಾರನ್ನೂ ಕಾಯಿಸಿ ಸತಾಯಿಸದೆ ಮುಂದೆ ಕೂರಿಸಿಕೊಂಡು ಕೆಲಸ ಮಾಡಿ ಕಳುಹಿಸುತ್ತಿದ್ದ. ಇದರಿಂದಾಗಿ ಖುಷಿಯಿಂದಲೇ ಕೆಲಸ ಆದವರು ನೂರು ಇನ್ನೂರು ಕೊಟ್ಟು ಹೋಗುತ್ತಿದ್ದರು. ಅದೇ ತಿಂಗಳಿಗೆ ಸರಾಸರಿ ಹತ್ತನ್ನೆರಡು ಸಾವಿರವಾಗುತ್ತಿತ್ತು. ಹೆಂಡತಿ ಹಳ್ಳಿಯ ಬಡ ಕುಟುಂಬದಿಂದ ಬಂದಿದ್ದರಿಂದ ಸಂಸಾರವನ್ನು ನೀಟಾಗಿಯೇ ನಿಭಾಯಿಸಿಕೊಂಡು ಹೋಗುತ್ತಿದ್ದಳು. ಊರಿನ ಕಡೆಯ ತಾಪತ್ರಯಗಳಿಗೂ ಆಗಾಗ ಪೆಂಚಾಲಯ್ಯ ಹೆಗಲು ಕೊಡುತ್ತಿದ್ದುದ್ದರಿಂದ ಪ್ರೀತಿ ವಿಶ್ವಾಸಗಳನ್ನು ಆ ಕಡೆಯಲ್ಲೂ ಉಳಿಸಿಕೊಂಡಿದ್ದ. ಬುದ್ಧಿವಂತಿಕೆ ಉಪಯೋಗಿಸಿ ಕೆಲಸಕ್ಕೆ ಸೇರಿದ ನಾಲ್ಕು ವರ್ಷಗಳಲ್ಲೆ ಚಿಕ್ಕದೊಂದು ರೆವಿನ್ಯೂ ಸೈಟು ಖರೀದಿಸಿ, ಲೋನ್ ಮಾಡಿ ಪುಟ್ಟದೊಂದು ಗೂಡನ್ನೂ ಕಟ್ಟಿಕೊಂಡಿದ್ದ. ಆ ಜಾಗ ಈಗ ಎಂಜಿ ರೋಡಿನಂತೆ ಡೆವೆಲಪ್ ಆಗಿತ್ತು. ನಿವೃತ್ತಿಯಾದ ಮೇಲೆ ಬರುವ ಬೆನಿಫಿಟ್ಸ್ ಎಲ್ಲಾ ಸೇರಿ ಮೂವತ್ತು ಲಕ್ಷ ಬರುವುದಿತ್ತು. ಅದನ್ನು ಹಂಗೆ ಬ್ಯಾಂಕಿನಲ್ಲಿಟ್ಟು ಬರುವ ಬಡ್ಡಿ ಮತ್ತು ಪೆನ್ಷನ್ನೊಂದಿಗೆ ಸರಳವಾಗಿ ಹಾಯಾದ ಜೀವನ ನಡೆಸಬಹುದೆಂದು ಲೆಕ್ಕಾಚಾರ